ದಿನಾಂಕಃ 27–02–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ– ಎದುರುದಾರರ ಪರವಾಗಿಃ ಶ್ರೀ.SWK ವಕೀಲರಿಂದ

ಏಪ್ರಿಲ್–2022 ರಿಂದ ನಾನು ಅರ್ಜಿದಾರರ ಸಂಸ್ಥೆಯಲ್ಲಿ ಪ್ರಿನ್ಸಿಪಾಲ್ ಆಗಿ ಕೆಲಸ ಮಾಡುತ್ತಿದ್ದೇನೆ. ಅರ್ಜಿದಾರರ ಸಂಸ್ಥೆ ಪರವಾಗಿ ಕೇಸನ್ನು ನಡೆಸಲು ನಿಮಗೆ ಅಧಿಕಾರ ಪತ್ರ ನೀಡಿದ್ದಾರಾ ಎಂದರೆ ಸಾಕ್ಷಿ ಸಂಸ್ಥೆಯ ಅಧ್ಯಕ್ಷರು ಮೌಖಿಕವಾಗಿ ನನಗೆ ಕೇಸು ನಡೆಸಲು ತಿಳಿಸಿದ್ದಾರೆ ಮತ್ತು ಲಿಖಿತವಾಗಿ ಅಧಿಕಾರ ಪತ್ರ ನೀಡಿಲ್ಲ. Trust ಗೆ ಸಂಬಂಧಪಟ್ಟ ದಾಖಲಾತಿಗಳು ಇದೆ ಆದರೆ ಅದನ್ನು ಈ ನ್ಯಾಯಾಲಯದಲ್ಲಿ ಹಾಜರು ಮಾಡಿಲ್ಲ. ಕಾಂಟ್ರಾಕ್ಟ ಆಧಾರದ ಮೇಲೆ part time teachers ನ್ನು ನೇಮಕಾತಿ ಮಾಡಿಕೊಂಡ ಬಗ್ಗೆ ನೀವು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ದಾಖಲಾತಿ ಹಾಜರು ಮಾಡಿಲ್ಲ ಎಂದು ಹೇಳುತ್ತಾರೆ. ಗೌರವಧನ ಮತ್ತು ವೇತನ ಎರಡೂ ಬೇರೆ ಬೇರೆ ಅರ್ಥ ಇರುತ್ತದೆ ಎಂದರೆ ಸರಿ. ಈ ಪ್ರಕರಣ 2017 ರಿಂದ 2018 ರವರೆಗೂ ಸಂಬಂಧಪಟ್ಟಿದ್ದು ಮತ್ತು ಆ ಕಾಲದಲ್ಲಿ ನಾನು ಅರ್ಜಿದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಮತ್ತು ಕೆಲಸಕ್ಕೆ ಸೇರಿದ ಮೇಲೆ ದಾಖಲಾತಿಗಳ ಮೂಲಕ ಮಾಹಿತಿ ಪಡೆದುಕೊಂಡಿದ್ದೇನೆ. ದಿನಾಂಕಃ29–9–2016 ಇ ಎಸ್ ಐ ಸಂಸ್ಥೆಯವರು ಸಿ–11 ನೋಟೀಸ್ ಮುಖಾಂತರ ನಿಮ್ಮ ಸಂಸ್ಥೆಗೆ ಇ ಎಸ್ ಐ ಕೋಡ್ ನೀಡಿದ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕಃ26–4–2018 ಮತ್ತು 2–5–2018 ರಂದು ಇ ಎಸ್ ಐ ನವರು ಸಿ–18 ಎರಡು ನೋಟೀಸುಗಳನ್ನು ನಿಮ್ಮ ಸಂಸ್ಥೆಗೆ ನೀಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪರ್ಸನಲ್ ಹೀರಿಂಗ್ನಲ್ಲಿ ಹಿಂದಿನ ಪ್ರಿನ್ಸಿಪಾಲ್‌ರಾದ ನಂಜುಂಡಸ್ವಾಮಿ ರವರು ಹಾಜರಾಗಿ ಸ್ಯಾಲರಿ ಮತ್ತು ಇತರೇ ದಾಖಲಾತಿಗಳನ್ನು ಇ ಎಸ್ ಐ ಸಂಸ್ಥೆ ಮುಂದೆ ಹಾಜರು ಮಾಡಿದ್ದಾರೆ. ನಿಏ–3 ದಿನಾಂಕಃ11–7–2016 ರ ದಾಖಲಾತಿಯಲ್ಲಿ 8 ಜನ ಎಂಪ್ಲಾಯೀಸನ್ನು ತೋರಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಏ–4 ಜೂನ್ ಹಾಜರಾತಿ ದಾಖಲಾತಿ ಪ್ರಕಾರ 10 ಜನ ಎಂಪ್ಲಾಯೀಸ್ ಇದ್ದಾರೆ ಎಂದರೆ ಸರಿ. ಜೂನ್ ಹಾಜರಾತಿ ದಾಖಲಾತಿಯಲ್ಲಿ ನಮೂದು

ಮಾಡಿರುವ ನೇತ್ರಾವತಿ ಎನ್ ಮತ್ತು ಪುಷ್ಪ ಕೆ ಆರ್ ಇಬ್ಬರು ಎಂಪ್ಲಾಯೀಸ್‌ಗೆ ಸಂಬಳ ಕೊಟ್ಟ ಬಗ್ಗೆ ಯಾವುದೇ ದಾಖಲಾತಿಯನ್ನು ಈ ನ್ಯಾಯಾಲಯದಲ್ಲಿ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ಕಛೇರಿಯಲ್ಲಿ ಪರಿಶೀಲಿಸುತ್ತೇನೆ ಎನ್ನುತ್ತಾರೆ.

ಈ ಹಂತದಲ್ಲಿ ಕಾಲಾವಕಾಶ ಕೇಳಿದ್ದರಿಂದ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಇ.ಎಸ್.ಐ.ನ್ಯಾಯಾಲಯ,
ಮೈಸೂರು.